# 1999

# CRIMINOLOGY

## Paper 1

*Time : 3 Hours* | *Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions **1** and **5** which are compulsory, and any **three** of the remaining questions, selecting at least **one** question from each Section.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

*[Turn over*

## SECTION A

1. Answer any ***three*** of the following (each answer should be in about 200 words) :

   (a) "The systematic criminal behaviour is determined in a process of association with those who commit crimes just as in the case of systematic lawful behaviour." — Comment.

   (b) "A man may be suffering from some form of insanity in the sense in which the term is used by medical men but may not be suffering from unsoundness of mind as described in Section 84, I.P.C." — Discuss the criminal liability of people of unsound mind.

   (c) "From the microscopic examination of hair, it is possible to say whether they are of the same or of different colours or sizes, and their examination may help in deciding where the hairs come from." — How ?

   (d) "The victim is sometimes a cause of crime against himself/herself." — How and when ?

2. (a) "The criterion that white collar crime cannot legally be considered crime because it is not prosecuted in criminal courts and the persons involved are not found guilty or convicted by a criminal court is not significant for the purpose of criminological studies." — Why ?

   (b) The pattern of organised crime is feudal in character." — How ? Explain why it is so.

3. (a) "The ecologists attempt to explain crime as a function of social change that occurs along with environmental change." — Discuss.

   (b) "A criminal is born" — said Cesare Lombroso. But many others objected to it and said : "No, a criminal is made." — Discuss.

## ವಿಭಾಗ A

1. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ (ಪ್ರತಿಯೊಂದು ಉತ್ತರ 200 ಪದಗಳನ್ನು ಮೀರದಿರಲಿ) :

   (ಎ) "ವ್ಯವಸ್ಥಿತ ಕಾನೂನುಸಮ್ಮತ ವರ್ತನೆಯಂತೆಯೇ, ವ್ಯವಸ್ಥಿತವಾದ ಅಪರಾಧೀ ವರ್ತನೆಯೂ [illegible] ಅಪರಾಧಗಳನ್ನು ಮಾಡುವವರ ಸಹವಾಸದಿಂದ ನಿರ್ಣಯವಾಗುತ್ತದೆ." – ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

   (ಬಿ) "ಒಬ್ಬ ವ್ಯಕ್ತಿಯು ವೈದ್ಯಕೀಯ ಕ್ಷೇತ್ರದಲ್ಲಿ ಹೇಳಲಾಗುವ ಅರ್ಥದ ಮೇರೆಗೆ ಹುಚ್ಚನಾಗಿರಬಹುದು. ಆದರೆ ಅವನು ಭಾರತೀಯ ದಂಡಪ್ರಕ್ರಿಯಾ ಸಂಹಿತೆಯ ಪರಿಚ್ಛೇದ 84ರಲ್ಲಿ ವರ್ಣಿಸಿರುವ ಅರ್ಥದ ಮೇರೆಗೆ ಮಾನಸಿಕ ತೊಂದರೆಯವನಲ್ಲದಿರಬಹುದು." – ಮಾನಸಿಕ ತೊಂದರೆಯ ಜನರ ಅಪರಾಧಿಕ ದಾಯಿತ್ವದ ಬಗ್ಗೆ ಚರ್ಚಿಸಿ.

   (ಸಿ) "ಕೂದಲುಗಳನ್ನು ಸೂಕ್ಷ್ಮದರ್ಶಕಯಂತ್ರದಿಂದ ಪರೀಕ್ಷಿಸುವ ಮೂಲಕ ಅವೆಲ್ಲವೂ ಒಂದೇ ಬಣ್ಣದವೇ ಅಥವಾ ಒಂದೇ ಗಾತ್ರದವೇ ಎಂಬುದನ್ನು ತಿಳಿಯಲು ಸಾಧ್ಯ ಮತ್ತು ಪರೀಕ್ಷಣೆಯ ಮೂಲಕ ಕೂದಲುಗಳು ಯಾವ ಭಾಗದವು ಎಂದು ಹೇಳುವುದೂ ಸಾಧ್ಯವಿದೆ." – ಹೇಗೆ ?

   (ಡಿ) ಉತ್ಪೀಡಿತರು ಕೆಲವೊಮ್ಮೆ ತಮ್ಮ ಮೇಲೇ ಅಪರಾಧ ನಡೆಸಬಹುದು. – ಹೇಗೆ ಮತ್ತು ಯಾವಾಗ ?

2. (ಎ) 'ವೈಟ್ ಕಾಲರ್' ಅಪರಾಧದ ಬಗ್ಗೆ ಕ್ರಿಮಿನಲ್ ಕೋರ್ಟುಗಳಲ್ಲಿ ವಿಚಾರಣೆ ನಡೆಸಲಾಗುವುದಿಲ್ಲ ಎಂಬ ಕಾರಣದಿಂದ ಅವುಗಳನ್ನು ಅಪರಾಧ ಎಂದು ಪರಿಗಣಿಸುವುದಿಲ್ಲ ಎಂಬುದಾಗಲೀ ಮತ್ತು ಅದರಲ್ಲಿ ಭಾಗಿಯಾಗಿರುವ ವ್ಯಕ್ತಿಗಳನ್ನು ಅಪರಾಧಿಗಳು ಎಂದು ಗಣಿಸುವುದಿಲ್ಲ, ಹಾಗೂ ಕ್ರಿಮಿನಲ್ ಕೋರ್ಟು ಅವರಿಗೆ ಶಿಕ್ಷೆ ನೀಡುವುದಿಲ್ಲ ಎಂಬುದಾಗಲೀ ಅಪರಾಧಶಾಸ್ತ್ರದ ಅಧ್ಯಯನದ ಉದ್ದೇಶಕ್ಕೆ ಮುಖ್ಯವಲ್ಲ." – ಏಕೆ ?

   (ಬಿ) "ಸಂಘಟಿತ ಅಪರಾಧದ ವಿನ್ಯಾಸವು ಫ್ಯೂಡಲ್ ಸ್ವರೂಪದ್ದಾಗಿದೆ." – ಹೇಗೆ, ಮತ್ತು ಇದೇಕೆ ಹೀಗೆ ಎಂಬುದನ್ನು ವಿವರಿಸಿ.

3. (ಎ) "ಅಪರಾಧವು, ಪರಿಸರದ ಬದಲಾವಣೆಯೊಂದಿಗೆ ನಡೆಯುವ ಸಾಮಾಜಿಕ ಬದಲಾವಣೆಯ ಒಂದು ಅಭಿವ್ಯಕ್ತಿ ಎಂದು ವಿವರಿಸುವ ಪ್ರಯತ್ನವನ್ನು ಪರಿಸರತಜ್ಞರು ಮಾಡುತ್ತಾರೆ." – ಚರ್ಚಿಸಿ.

   (ಬಿ) "ಅಪರಾಧಿಯು ಹುಟ್ಟಿನಿಂದಲೇ ಆಗಿರುತ್ತಾನೆ," ಎಂದು ಸಿಸಾರೆ ಲೊಂಬ್ರೊಸೊ ಹೇಳಿದ. ಆದರೆ ಇನ್ನಿತರ ತಜ್ಞರು ಅದನ್ನು ಅಲ್ಲಗಳೆದರು ಮತ್ತು "ಅಪರಾಧಿಯು ತಯಾರಾಗುತ್ತಾನೆ", ಎಂದು ಹೇಳಿದರು. – ಚರ್ಚಿಸಿ.

[Turn over

4. Answer any ***two*** of the following :

(a) "The best way to identify a seminal stain is by performing the acid phosphatase test." — Do you agree ? Explain the test and show its advantages over other tests.

(b) "Dead men tell tales." — Explain how far the dictum is helpful in establishing the cause of death through an autopsy.

(c) "In cases of poisoning, even if all the findings are suggestive of poisoning, definite opinion as to the cause of death should be furnished by a medical officer only after a chemical analysis." — What questions will you ask a medical officer in poisoning cases ? How will you see to it that the viscera is sent properly for chemical analysis ?

4. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ :

(ಅ) "ಆಸಿಡ್ ಫಾಸ್ಫಟೇಸ್ ಪರೀಕ್ಷೆಯೇ ವೀರ್ಯದ ಕಲೆಯನ್ನು ಗುರುತಿಸುವುದಕ್ಕೆ ಅತ್ಯುತ್ತಮ ವಿಧಾನ." – ಇದನ್ನು ಒಪ್ಪುತ್ತೀರಾ ? ಈ ಪರೀಕ್ಷಣ ವಿಧಾನವನ್ನು ವಿವರಿಸಿ ಮತ್ತು ಇದು ಇತರ ಪರೀಕ್ಷಣೆಗಳಿಗಿಂತ ಹೇಗೆ ಉತ್ತಮ ಎಂಬುದನ್ನು ತಿಳಿಸಿ.

(ಆ) "ಮೃತ ವ್ಯಕ್ತಿಗಳು ಕಥೆಗಳನ್ನು ಹೇಳುತ್ತಾರೆ." – ಶವಪರೀಕ್ಷಣೆಯ ಮೂಲಕ ಒಂದು ಸಾವಿನ ಕಾರಣವನ್ನು ರುಜುವಾತು ಮಾಡುವುದಕ್ಕೆ ಈ ಅಂಶ ಎಷ್ಟರಮಟ್ಟಿಗೆ ಸಹಾಯಕ ಎಂಬುದನ್ನು ವಿವರಿಸಿ.

(ಇ) "ವಿಷಪ್ರಾಶನದ ಪ್ರಕರಣಗಳಲ್ಲಿ, ಬೇರೆಲ್ಲ ಅಂಶಗಳೂ ಅದನ್ನು ಸಮರ್ಥಿಸುವಂತಿದ್ದರೂ, ಮರಣದ ಕಾರಣದ ಬಗ್ಗೆ ಖಚಿತ ಅಭಿಪ್ರಾಯವನ್ನು ವೈದ್ಯಾಧಿಕಾರಿಯೊಬ್ಬರು ರಾಸಾಯನಿಕ ವಿಶ್ಲೇಷಣೆಯನಂತರವೇ ನೀಡಬೇಕು. ವಿಷಪ್ರಾಶನದ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ವೈದ್ಯಾಧಿಕಾರಿಗೆ ಯಾವ ಪ್ರಶ್ನೆಗಳನ್ನು ಕೇಳುತ್ತೀರಿ ? ರಾಸಾಯನಿಕ ವಿಶ್ಲೇಷಣೆಗಾಗಿ 'ವಿಸೆರಾ'ವನ್ನು ಸರಿಯಾಗಿ ಕಳುಹಿಸಿಕೊಡುವ ಬಗ್ಗೆ ನೀವು ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ?

## SECTION B

5. Answer any ***three*** of the following (each answer should be in about 200 words) :

(a) When a revolver is fired, traces of powder residues are sometimes transferred onto the hands of the shooter. Detection of such residues helps the investigator to identify the firer. How ?

(b) If the father of a child has the blood group A and the mother has B, the children possible for such a couple will have the blood groups A, B, O and OB, right ? How will you decide a case of disputed paternity by blood grouping tests ?

(c) "A fresh abrasion will be red in colour, because there will be oozing of blood from the injured capillaries in the exposed dermis of the skin." — Discuss how you will decide the age of an abrasion and the medico-legal importance of abrasions.

(d) "The pelvis is the best bone to determine the sex of a person." — How ?

6. (a) State the meaning of research design and describe the various types of research designs.

(b) The classical school of criminology was based on rationalism. Do you agree ? How ?

7. Answer any ***two*** of the following :

(a) "The photographic superimposition technique is today a widely used and accepted method to identify an individual's photograph with the skull." — How ?

(b) "The general exceptions in Chapter IV of the Penal Code are applicable not only to offences under the Penal Code, but also to offences under special or local laws." — Explain.

(c) The Lombrosian concept about criminals, particularly the theory of born criminals, was challenged by Charles Goring. Explain.

8. Write short notes on any ***three*** of the following :

(a) Shadow printings on Indian paper money

(b) Classification of poisons on the basis of their action on the body

(c) Demonological theory

(d) Determination of the age of a contusion

## ವಿಭಾಗ B

5. ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ (ಪ್ರತಿಯೊಂದು ಉತ್ತರ 200 ಪದಗಳನ್ನು ಮೀರದಿರಲಿ) :

   (ಎ) ಬಂದೂಕಿನಿಂದ ಗುಂಡು ಹಾರಿಸಿದಾಗ, ಕೆಲವೊಮ್ಮೆ ಅದರ ಪುಡಿಯ ಕಣಗಳು ಗುಂಡುಹಾರಿಸಿದವರ ಕೈಯಲ್ಲೇ ಉಳಿಯುತ್ತವೆ. ಇಂತಹ ಕಣಗಳ ಪತ್ತೆಯಿಂದ ತನಿಖೆದಾರರು ಗುಂಡುಹಾರಿಸಿದ ವ್ಯಕ್ತಿಯನ್ನು ಕಂಡುಹಿಡಿಯಬಹುದು. ಹೇಗೆ ?

   (ಬಿ) ತಂದೆಯ ರಕ್ತದ ಗುಂಪು A ಆಗಿದ್ದು ತಾಯಿಯದು B ಆಗಿದ್ದಾಗ ಅಂತಹ ದಂಪತಿಗಳಿಗೆ ಹುಟ್ಟುವ ಮಕ್ಕಳ ರಕ್ತದ ಗುಂಪು A, B, O ಮತ್ತು OB ಆಗಿರಬಹುದು. ಸರಿಯಷ್ಟೇ ? ರಕ್ತದ ಗುಂಪಿನ ಪರೀಕ್ಷೆಯಿಂದ ವಿವಾದಿತ ಮಾತಾಪಿತೃವಿನ ಪ್ರಕರಣವನ್ನು ಹೇಗೆ ನಿರ್ಧರಿಸುತ್ತೀರಿ ?

   (ಸಿ) ಆಗಷ್ಟು ಆದ ತರಿದ ಗಾಯದ ಬಣ್ಣ ಕೆಂಪಾಗಿರುತ್ತದೆ. ಯಾಕೆಂದರೆ ತೆರೆದುಕೊಂಡ ಒಳಚರ್ಮದ ಹರಿದ ಲೋಮನಾಳಗಳಿಂದ ರಕ್ತ ಒಸರುತ್ತಿರುತ್ತದೆ. ತರಿದ ಗಾಯದ ಕಾಲವನ್ನು ಹೇಗೆ ನಿರ್ಧರಿಸುತ್ತೀರಿ ಮತ್ತು ಅವುಗಳ ವೈದ್ಯಕೀಯ ಹಾಗೂ ಕಾನೂನಿನ ಮಹತ್ವವೇನು ?

   (ಡಿ) "ವ್ಯಕ್ತಿಯ ಲಿಂಗ ನಿರ್ಧಾರಕ್ಕೆ ವಸ್ತಿಕುಹರದ ಎಲುಬು (pelvis) ಅತ್ಯಂತ ಸೂಕ್ತ." – ಹೇಗೆ ?

6. (ಎ) ಸಂಶೋಧನ ವಿನ್ಯಾಸದ ಅರ್ಥವನ್ನು ವಿವರಿಸಿ. ವಿವಿಧ ರೀತಿಯ ಸಂಶೋಧನ ವಿನ್ಯಾಸಗಳು ಯಾವುವು ? ವಿವರಿಸಿ.

   (ಬಿ) ಅಪರಾಧಶಾಸ್ತ್ರದ ವರೇಣ್ಯ ಪ್ರಸ್ಥಾನವು ತರ್ಕ ಪಾರಮ್ಯವಾದವನ್ನು ಆಧರಿಸಿದೆ. ಇದನ್ನು ನೀವು ಒಪ್ಪುತ್ತೀರಾ ಮತ್ತು ಹೇಗೆ ಒಪ್ಪುತ್ತೀರಿ ?

7. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ :

   (ಎ) "ವ್ಯಕ್ತಿಯ ಭಾವಚಿತ್ರ ಹಾಗೂ ತಲೆಬುರುಡೆಯೊಂದಿಗೆ ಅದರ ಸಂಬಂಧವನ್ನು ಕಂಡುಹಿಡಿಯುವುದಕ್ಕೆ ಛಾಯಾಚಿತ್ರದ ಸೂಪರ್‌ಇಂಪೊಸಿಷನ್ ತಂತ್ರವು ಇಂದು ವ್ಯಾಪಕವಾಗಿ ಬಳಸಲಾಗುತ್ತಿರುವ ಮತ್ತು ಅಂಗೀಕೃತವಾದ ವಿಧಾನವಾಗಿದೆ." – ಹೇಗೆ ?

   (ಬಿ) "ದಂಡ ಸಂಹಿತೆಯ 4ನೇ ಅಧ್ಯಾಯದಲ್ಲಿರುವ ಸಾಮಾನ್ಯ ಅಪವಾದಗಳು ದಂಡಸಂಹಿತೆಯ ಅಡಿಯಲ್ಲಿ ಬರುವ ಅಪರಾಧಗಳಿಗಷ್ಟೇ ಅಲ್ಲ, ವಿಶೇಷ ಅಥವಾ ಸ್ಥಳೀಯ ಕಾನೂನಿನ ಅಡಿಯಲ್ಲಿ ಮಾಡಲಾದ ಅಪರಾಧಗಳಿಗೂ ಅನ್ವಯಿಸುತ್ತವೆ." – ವಿವರಿಸಿ.

   (ಸಿ) ಅಪರಾಧಿಗಳ ಬಗ್ಗೆ, ಮುಖ್ಯವಾಗಿ ಹುಟ್ಟು ಅಪರಾಧಿಗಳ ಸಿದ್ಧಾಂತ ಕುರಿತಂತೆ, ಲೊಂಬ್ರೋಸೊನ ಪರಿಕಲ್ಪನೆಯನ್ನು ಚಾರ್ಲ್ಸ್ ಗೋರಿಂಗ್ ಪ್ರಶ್ನಿಸಿದ. ವಿವರಿಸಿ.

8. ಕೆಳಗಿನ ಯಾವುದಾದರೂ **ಮೂರರ** ಬಗ್ಗೆ ಕಿರುಟಿಪ್ಪಣಿ ಬರೆಯಿರಿ :

   (ಎ) ಭಾರತದ ಕಾಗದ ಹಣದ ಮೇಲಿನ ಛಾಯಾ ಮುದ್ರಣ

   (ಬಿ) ದೇಹದ ಮೇಲೆ ಮಾಡುವ ಪರಿಣಾಮವನ್ನು ಆಧಾರಿಸಿ ಮಾಡಲಾದ ವಿಷಗಳ ವರ್ಗೀಕರಣ

   (ಸಿ) ಭೂತವಿದ್ಯೆಯ ಸಿದ್ಧಾಂತ

   (ಡಿ) ಜಜ್ಜುಗಾಯದ ಕಾಲ ನಿರ್ಧರಣೆ

# 1999

# CRIMINOLOGY

## Paper 2

*Time : 3 Hours* | *Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions **1** and **5** which are compulsory, and any **three** of the remaining questions, selecting at least **one** question from each Section.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

## SECTION A

1. Answer any *three* of the following (each answer should be in about 200 words) :

   (a) "The founding fathers of the Indian Constitution knew that communalism would be a serious threat to the unity and integrity of the country. The frequent recurrence of communal clashes shows the irony of fate and the tragedy of Indian democracy, showing that the pre-Constitutional fantasies do not coincide with the post-Constitutional realities." — Examine the statement by bringing out the causes of communal riots in India.

   (b) "To establish a defence on the ground of insanity, it must be clearly proved that at the time of committing the act, the party accused was labouring under such defect of reason, from disease of the mind, as not to know the nature and quality of the act he was doing, or, if he did know, then he did not know he was doing what was wrong." — Examine the observation by bringing out the criminal liability of a person affected by phobic disorders.

   (c) "Everything changes with the passage of time and the rate of change varies with different objects." — Apply this theory in crime investigation, giving illustrations.

   (d) "Probation is the suspension of sentence by a court or a conditional release from commitment to a penal institution contingent upon good behaviour." — Distinguish probation from parole and bring out the advantages of probation over parole for correcting offenders.

2. (a) "Social consciousness as regards the necessity of special provisions for the treatment, protection, training and welfare of juvenile offenders in need of State care has finally found expression in the passing of the Juvenile Justice Act, 1986 in India." — Trace the development of juvenile legislations in India.

## ವಿಭಾಗ A

1. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ (ಪ್ರತಿಯೊಂದು ಉತ್ತರ 200 ಪದಗಳನ್ನು ಮೀರದಿರಲಿ) :

(ಎ) "ಕೋಮುವಾದವು ದೇಶದ ಏಕತೆ ಹಾಗೂ ಭಾವೈಕ್ಯತೆಗೆ ಬಹು ಗಂಭೀರ ಅಪಾಯ ಒಡ್ಡುತ್ತದೆ ಎಂಬುದನ್ನು ಭಾರತದ ಸಂವಿಧಾನದ ಸಂಸ್ಥಾಪಕರು ತಿಳಿದಿದ್ದರು. ಪದೇ ಪದೇ ಸಂಭವಿಸುತ್ತಿರುವ ಕೋಮು ಘರ್ಷಣೆಗಳು ವಿಧಿಯ ವ್ಯಂಗ್ಯವನ್ನು ತೋರಿಸುತ್ತಿವೆ. ಭಾರತದ ಪ್ರಜಾಪ್ರಭುತ್ವದ ದುರಂತವು ಸಂವಿಧಾನ ಪೂರ್ವದ ಕಲ್ಪನೆಗಳಿಗೂ ಸಂವಿಧಾನ ರಚನೆಯಾದನಂತರದ ವಾಸ್ತವತೆಗಳಿಗೂ ಹೊಂದಿಕೆಯಾಗದಿರುವುದನ್ನು ರುಜುವಾತು ಪಡಿಸಿದೆ." – ಭಾರತದಲ್ಲಿ ಕೋಮು ಗಲಭೆಗಳಿಗೆ ಕಾರಣವನ್ನು ನಿರೂಪಿಸುವ ಮೂಲಕ ಈ ಹೇಳಿಕೆಯನ್ನು ಪರಿಶೀಲಿಸಿ.

(ಬಿ) "ಮತಿಭ್ರಮಣೆಯ ಆಧಾರದ ಮೇಲೆ ಪ್ರತಿವಾದವನ್ನು ಸ್ಥಾಪಿಸಬೇಕಾಗಿದ್ದಲ್ಲಿ, ಆರೋಪಿತನಾದ ವ್ಯಕ್ತಿಯು ಅಂತಹ ಕೃತ್ಯವನ್ನು ಮಾಡುವ ಸಂದರ್ಭದಲ್ಲಿ ತಾನು ಮಾಡುತ್ತಿದ್ದ ಕಾರ್ಯದ ಸ್ವರೂಪ ಮತ್ತು ಸ್ವಭಾವವನ್ನು ತಿಳಿಯಲಾರದಷ್ಟು ವಿವೇಚನಾಶೂನ್ಯತೆ ಹಾಗೂ ಮಾನಸಿಕ ರೋಗವನ್ನು ಹೊಂದಿದ್ದ, ಮತ್ತು ಒಂದು ವೇಳೆ ತಾನು ಮಾಡುತ್ತಿರುವುದೇನು ಎಂದು ಗೊತ್ತಿದ್ದರೂ ತಾನು ಮಾಡುತ್ತಿರುವುದು ತಪ್ಪು ಎಂಬುದನ್ನು ತಿಳಿಯಲಾರನಾಗಿದ್ದ ಎಂದು ಸ್ಪಷ್ಟವಾಗಿ ಸಾಬೀತು ಮಾಡಬೇಕಾಗುತ್ತದೆ." – ಭಯದ ವೈಪರೀತ್ಯಗಳಿಗೆ ತುತ್ತಾದ ವ್ಯಕ್ತಿಯು ಅಪರಾಧಕ್ಕೆ ಹೊಣೆಯಾಗುವ ಸಂಗತಿಯನ್ನು ನಿರೂಪಿಸುವ ಮೂಲಕ ಈ ಅಭಿಪ್ರಾಯವನ್ನು ಪರಿಶೀಲಿಸಿ.

(ಸಿ) "ಸಮಯ ಕಳೆದಂತೆ ಎಲ್ಲವೂ ಬದಲಾಗುತ್ತದೆ ಮತ್ತು ಆಯಾ ವಿಷಯಕ್ಕೆ ತಕ್ಕಂತೆ ಬದಲಾವಣೆಯ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ." – ನಿದರ್ಶನಗಳನ್ನು ಕೊಟ್ಟು, ಅಪರಾಧ ತನಿಖೆಗೆ ಈ ಸಿದ್ಧಾಂತವನ್ನು ಅನ್ವಯಿಸಿ.

(ಡಿ) ಪರಿವೀಕ್ಷಣೆ ಎನ್ನುವುದು ನ್ಯಾಯಾಲಯದಿಂದ ಶಿಕ್ಷಾ ಆಜ್ಞೆಯ ತಡೆಹಿಡಿಕೆ ಅಥವಾ ಒಳ್ಳೆಯ ನಡತೆಯನ್ನು ನಿರೀಕ್ಷಿಸಿ ಶಿಕ್ಷಾಸಂಸ್ಥೆಗೆ ಒಳಪಡಿಸುವುದರಿಂದ ಷರತ್ತಿಗೊಳಪಟ್ಟ ಬಿಡುಗಡೆ." – ಪರಿವೀಕ್ಷಣೆಗೂ ಪೆರೋಲ್‌ಗೂ ಇರುವ ವ್ಯತ್ಯಾಸವನ್ನು ತಿಳಿಸಿ ಮತ್ತು ಅಪರಾಧಿಗಳನ್ನು ತಿದ್ದುವುದಕ್ಕೆ ಪೆರೋಲ್‌ಗಿಂತ ಪರಿವೀಕ್ಷಣಾ ವಿಧಾನದಲ್ಲಿ ಏನೇನು ಅನುಕೂಲಗಳಿವೆ ಎಂಬುದನ್ನು ತಿಳಿಸಿ.

2. (ಎ) "ಬಾಲಾಪರಾಧಿಗಳನ್ನು ನೋಡಿಕೊಳ್ಳುವ ವಿಧಾನ, ಅವರ ರಕ್ಷಣೆ, ತರಬೇತಿ ಹಾಗೂ ಕ್ಷೇಮಾಭಿವೃದ್ಧಿಯ ದೃಷ್ಟಿಯಿಂದ ರಾಜ್ಯದ ಆಶ್ರಯದಲ್ಲಿ ವಿಶೇಷ ಅವಕಾಶಗಳಿರಬೇಕು ಎಂಬ ಬಗ್ಗೆ ಮಾಡಿದ ಸಾಮಾಜಿಕ ಅರಿವಿನ ಪರಿಣಾಮವಾಗಿ ಭಾರತದಲ್ಲಿ ಬಾಲಾಪರಾಧಿಗಳ ನ್ಯಾಯಿಕ ಅಧಿನಿಯಮ 1986 ಎಂಬುದು ರೂಪುಗೊಂಡಿತು. ಭಾರತದಲ್ಲಿ ಬಾಲಾಪರಾಧಿಗಳಿಗೆ ಸಂಬಂಧಿಸಿದ ಶಾಸನಗಳನ್ನು ತರುವಲ್ಲಿ ಆದ ಬೆಳವಣಿಗೆಯ ಹಂತಗಳನ್ನು ನಿರೂಪಿಸಿ.

(b) "Clinical method presumes that criminality is the expression of the symptom of some disorder in the offenders. As such, the disease or disorder has to be treated on an individual basis." — Discuss the utility of client-centred therapy in treating criminals and recidivists.

3\. (a) "A deviant family may result in an inability for the remaining parent or parent surrogates to control the child, fail to provide proper role models or fail to contribute sufficient maternal or parental love." — Discuss the role of deviant families in causing crime and delinquency.

(b) Distinguish between interrogation and interviewing during police investigation. What are the psychological techniques of interviewing ?

4\. (a) "F.I.R. is not a substantive evidence but can be used to corroborate or contradict the evidence of the informant given in court or to impeach his credit." — Discuss.

(b) "The wheel or pie search can be employed to inspect large outdoor scenes of crime." — Why ? What are the techniques of searching a scene of crime ?

(ಬಿ) "ಅಪರಾಧ ಪ್ರವೃತ್ತಿಯು ಅಪರಾಧಿಗಳಲ್ಲಿರುವ ಯಾವುದೇ ಒಂದು ಏರುಪೇರಿನ ಲಕ್ಷಣದ ಅಭಿವ್ಯಕ್ತಿ ಎಂದು ಕ್ಲಿನಿಕಲ್ ವಿಧಾನ ಭಾವಿಸುತ್ತದೆ. ಆದ್ದರಿಂದ ಈ ರೋಗ ಅಥವಾ ಏರುಪೇರಿಗೆ ಬೇರೆಬೇರೆ ವ್ಯಕ್ತಿಗಳಿಗನುಗುಣವಾಗಿಯೇ ಚಿಕಿತ್ಸೆ ನೀಡಬೇಕಾಗುತ್ತದೆ." – ಅಪರಾಧಿಗಳು ಮತ್ತು ರೆಸಿಡಿವಿಸ್ಟ್‌ಗಳ ಚಿಕಿತ್ಸೆಗೆ ವ್ಯಕ್ತಿಕೇಂದ್ರಿತ ಚಿಕಿತ್ಸೆ ವಿಧಾನವನ್ನು ಅನುಸರಿಸುವುದರ ಪ್ರಯೋಜಕತೆಯ ಬಗ್ಗೆ ಚರ್ಚಿಸಿ.

3. (ಎ) "ಏರುಪೇರಾದ ಕುಟುಂಬಗಳ ಸಂದರ್ಭದಲ್ಲಿ, ಉಳಿದುಕೊಂಡ ತಂದೆ ಅಥವಾ ತಾಯಿ ಅಥವಾ ಬದಲಿ ಪೋಷಕರು ಮಗುವನ್ನು ನಿಯಂತ್ರಿಸಲು ಅಸಮರ್ಥರಾಗಬಹುದು, ಸರಿಯಾದ ಮಾದರಿಗಳನ್ನು ನೀಡದಿರಬಹುದು, ಅಥವಾ ಸಾಕಷ್ಟು ಪ್ರಮಾಣದಲ್ಲಿ ತಂದೆಯ ಅಥವಾ ತಾಯಿಯ ಪ್ರೀತಿಯನ್ನು ಕೊಡುವಲ್ಲಿ ವಿಫಲರಾಗಬಹುದು." – ಇಂತಹ ವಿಚಲಿತ ಕುಟುಂಬಗಳು ಅಪರಾಧ ಮತ್ತು ಬಾಲಾಪರಾಧವನ್ನು ಹುಟ್ಟುಹಾಕಲು ಎಷ್ಟರ ಮಟ್ಟಿಗೆ ಕಾರಣವಾಗುತ್ತವೆ ಎಂಬುದನ್ನು ಚರ್ಚಿಸಿ.

(ಬಿ) ಪೊಲೀಸ್ ತನಿಖೆಯಲ್ಲಿ ಪ್ರಶ್ನಾವಿಚಾರಣೆ ಹಾಗೂ ಮಾತುಕಥೆಯ ವಿಧಾನಗಳ ನಡುವಿನ ವ್ಯತ್ಯಾಸವೇನು ? ತಿಳಿಸಿ. ಮಾತುಕಥೆ ನಡೆಸುವ ಮನೋಶಾಸ್ತ್ರೀಯ ತಂತ್ರಗಳು ಯಾವುವು ? ತಿಳಿಸಿ.

4. (ಎ) "ಪ್ರಥಮ ಮಾಹಿತಿ ವರದಿ (FIR) ಯು ಸಾಕಷ್ಟು ಪ್ರಮಾಣದ ಸಾಕ್ಷ್ಯವಲ್ಲ. ಆದರೆ, ನ್ಯಾಯಾಲಯದಲ್ಲಿ ಮಾಹಿತಿದಾರನು ನೀಡಿದ ಸಾಕ್ಷ್ಯವನ್ನು ಪುಷ್ಟೀಕರಿಸುವುದಕ್ಕಾಗಲೀ ಅಥವಾ ವಿರೋಧಿಸುವುದಕ್ಕಾಗಲೀ ಅದನ್ನು ಬಳಸಬಹುದು ಅಥವಾ ಅವನ ಸಾಕ್ಷ್ಯವನ್ನು ಅಲ್ಲಗಳೆಯಲು ಬಳಸಬಹುದು." – ಚರ್ಚಿಸಿ.

(ಬಿ) ಚಕ್ರ ಅಥವಾ 'ಪೈ' ಶೋಧ ವಿಧಾನವನ್ನು ಬೃಹತ್ತರ ಹೊರಾಂಗಣ ಅಪರಾಧ ದೃಶ್ಯದ ತನಿಖೆಗಾಗಿ ಬಳಸಬಹುದು. ಯಾಕೆ ? ಅಪರಾಧ ದೃಶ್ಯವನ್ನು ಶೋಧಿಸುವ ತಂತ್ರಗಳು ಯಾವುವು ?

## SECTION B

5. Answer any ***three*** of the following (each answer should be in about 200 words) :

(a) "An open institution is characterized by the absence of material or physical precautions against escape such as walls, locks, bars, armed or other special security guards, and is a system based on self-discipline and the inmate's sense of responsibility." — How ?

(b) How will you handle, pack and transport hair for forensic examination ? Who are the experts who need not come to courts to give testimony under the Code of Criminal Procedure, 1973 ? Give the provisions of the law.

(c) "The retributive rationale is based upon the vindictive response of the criminal's victims and potential victims." — Discuss.

(d) "The prison industries in India are rarely productive, practically never teach anything that has any useful purpose after release and are not intended to give the inmate a sense of pride in his job inside and outside the prison." — Comment.

6. (a) "People having a higher I.Q. are better organized, disciplined and law-abiding." — Discuss the relationship between mental retardation and criminal behaviour.

(b) "A picture is worth a thousand words." — Discuss the utility of photographs in crime investigation and bring out the advantages of sketches of the scene of crime over photographs.

## ವಿಭಾಗ B

5. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ (ಪ್ರತಿಯೊಂದು ಉತ್ತರ 200 ಪದಗಳನ್ನು ಮೀರದಿರಲಿ) :

(ಎ) ಬಯಲು ಬಂಧನ ವ್ಯವಸ್ಥೆಯಲ್ಲಿ ಬಂಧಿಯು ತಪ್ಪಿಸಿಕೊಂಡು ಹೋಗುವುದನ್ನು ತಡೆಯುವ ಗೋಡೆ, ಬೀಗ, ಕಂಬಿ, ಸಶಸ್ತ್ರ ಅಥವಾ ಇತರ ರೀತಿಯ ಭದ್ರತಾ ಕಾವಲುಗಾರರು ಮೊದಲಾದ ಯಾವುದೇ ರೀತಿಯ ಭೌತಿಕ ಮಂಜಾಗರೂಕತೆಗಳು ಇರುವುದಿಲ್ಲ. ಇದು ಮೂಲತಃ, ಅಲ್ಲಿರುವ ವ್ಯಕ್ತಿಯ ಸ್ವಯಂಶಿಸ್ತು ಹಾಗೂ ಜವಾಬ್ದಾರಿಯ ಅರಿವನ್ನು ಆಧರಿಸಿರುವ ವ್ಯವಸ್ಥೆ.'' – ಹೇಗೆ ?

(ಬಿ) ಕೂದಲನ್ನು ನ್ಯಾಯಸಂಬಂಧಿ ವಿಚಾರಣೆಗೆ ಕಳುಹಿಸುವಾಗ ಅದನ್ನು ಯಾವ ರೀತಿಯಲ್ಲಿ ನಿಭಾಯಿಸುತ್ತೀರಿ ಮತ್ತು ಯಾವ ರೀತಿ ಪ್ಯಾಕ್ ಮಾಡಿ ಸಾಗಿಸುತ್ತೀರಿ ? ಅಪರಾಧ ದಂಡ ಪ್ರಕ್ರಿಯೆ 1973 ಪ್ರಕಾರ ಸಾಕ್ಷ್ಯ ನೀಡುವುದಕ್ಕಾಗಿ ಯಾವ ತಜ್ಞರು ನ್ಯಾಯಾಲಯಕ್ಕೆ ಬರಬೇಕಾದ ಅವಶ್ಯಕತೆ ಇಲ್ಲ ? ಕಾನೂನಿನಲ್ಲಿರುವ ಅವಕಾಶಗಳೇನು ? ತಿಳಿಸಿ.

(ಸಿ) "ಪ್ರತೀಕಾರಾತ್ಮಕ ಭಾವವು (rationale) ಅಪರಾಧಕೃತ್ಯಕ್ಕೆ ಬಲಿಯಾದವರ ಮತ್ತು ಬಲಿಯಾಗುವ ಸಾಧ್ಯತೆ ಇರುವವರ ಸೇಡಿನ ಪ್ರತಿಕ್ರಿಯೆಯನ್ನು ಆಧರಿಸಿದೆ.'' – ಚರ್ಚಿಸಿ.

(ಡಿ) "ಭಾರತದಲ್ಲಿರುವ ಕಾರಾಗಾರ ಕೈಗಾರಿಕೆಗಳಲ್ಲಿ ಪ್ರಯೋಜನಾತ್ಮಕತೆ ವಿರಳ; ವ್ಯಕ್ತಿಯನ್ನು ಬಿಡುಗಡೆ ಮಾಡಿದ ನಂತರ ಅವನಿಗೆ ಮುಂದೆ ಉಪಯುಕ್ತವಾಗಬಹುದಾದ ಯಾವುದೊಂದನ್ನೂ ಅವು ಕಲಿಸುವುದಿಲ್ಲ ಮತ್ತು ಬಂದೀಖಾನೆಯ ಒಳಗಾಗಲೀ ಹೊರಗಾಗಲೀ ವ್ಯಕ್ತಿಯು ಕಾರ್ಯಗೌರವವನ್ನು ಬೆಳೆಸಿಕೊಳ್ಳುವಂತೆ ಮಾಡುವ ಉದ್ದೇಶವೂ ಅದಕ್ಕಿಲ್ಲ.'' – ನಿಮ್ಮ ಅಭಿಪ್ರಾಯ ತಿಳಿಸಿ.

6. (ಎ) "ಅಧಿಕ I.Q. ಹೊಂದಿರುವ ಜನರು ಸುಸಂಘಟನೆಯ, ಶಿಸ್ತಿನ ಹಾಗೂ ಕಾನೂನಿಗೆ ಬದ್ಧವಾಗಿರುವ ಜನರಾಗಿರುತ್ತಾರೆ.'' – ಬುದ್ಧಿಮಾಂದ್ಯತೆಗೂ ಅಪರಾಧಿಕ ವರ್ತನೆಗೂ ಇರುವ ಸಂಬಂಧದ ಸ್ವರೂಪವನ್ನು ಚರ್ಚಿಸಿ.

(ಬಿ) "ಒಂದು ಸಾವಿರ ಪದಗಳು ತಿಳಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಒಂದು ಚಿತ್ರ ತಿಳಿಸುತ್ತದೆ.'' – ಅಪರಾಧ ತನಿಖೆಯಲ್ಲಿ ಛಾಯಾಚಿತ್ರಗಳ ಉಪಯುಕ್ತತೆಯನ್ನು ತಿಳಿಸಿ. "ಅಪರಾಧ ದೃಶ್ಯದ ಬಗ್ಗೆ ಛಾಯಾಚಿತ್ರಗಳಿಗಿಂತ ರೇಖಾಚಿತ್ರಗಳು (sketches) ಹೆಚ್ಚು ಉಪಯುಕ್ತ.'' – ಈ ವಿಷಯವನ್ನು ಚರ್ಚಿಸಿ.

[Turn over

7. (a) Who are pimps and panderers in the world of prostitution ? How does the dowry system promote prostitution in India ? How can a prostitute be rehabilitated ? Give suggestions.

(b) "An investigating officer should have some basic and inherent qualities." — What are they and why should he have them ? Discuss.

8. (a) "Cruel punishments have an inevitable tendency to produce cruelty in people." — Discuss the statement in the light of the punishments awarded in India under the Indian Penal Code 1860.

(b) "In ancient India, punishment was inflicted on people in accordance with law." — What was the objective of punishments in ancient India ?

7. (ಎ) ವೇಶ್ಯಾವೃತ್ತಿಯಲ್ಲಿ [illegible] ಮತ್ತು ಅವರ ಸಹಾಯಕರು ಯಾರು ? ಭಾರತದಲ್ಲಿ ವರದಕ್ಷಿಣೆ ಪದ್ಧತಿಯು ವೇಶ್ಯಾವೃತ್ತಿ ಹೆಚ್ಚಲು ಹೇಗೆ ಕಾರಣವಾಗಿದೆ ? ಒಬ್ಬ ವೇಶ್ಯೆಯ ಪುನರ್ವಸತೀಕರಣವನ್ನು ಯಾವ ರೀತಿ ಮಾಡಬಹುದು ? ನಿಮ್ಮ ಸೂಚನೆಗಳನ್ನು ಕೊಡಿರಿ.

(ಬಿ) "ತನಿಖಾಧಿಕಾರಿಯಲ್ಲಿ ಕೆಲವು ಮೂಲಭೂತ, ಅಂತರ್ಗತ ಗುಣಗಳಿರಬೇಕು." – ಅವು ಯಾವುವು ? ಮತ್ತು ಅವು ಯಾಕೆ ಅಗತ್ಯ ? ಚರ್ಚಿಸಿ.

8. (ಎ) "ಕ್ರೂರ ಶಿಕ್ಷಾವಿಧಾನಗಳು ಜನರಲ್ಲಿ ಕ್ರೌರ್ಯವನ್ನು ಬೆಳೆಸುತ್ತವೆ." – ಭಾರತದಲ್ಲಿ ಭಾರತದ ದಂಡ ಸಂಹಿತೆ 1860 ರ ಅನ್ವಯ ನೀಡಲಾಗುವ ಶಿಕ್ಷಾಕ್ರಮಗಳ ಹಿನ್ನೆಲೆಯಲ್ಲಿ ಈ ಹೇಳಿಕೆಯನ್ನು ಚರ್ಚಿಸಿ.

(ಬಿ) "ಪ್ರಾಚೀನ ಭಾರತದಲ್ಲಿ ಕಾನೂನಿನ ಪ್ರಕಾರವಾಗಿ ಜನರಿಗೆ ಶಿಕ್ಷೆಯನ್ನು ನೀಡಲಾಗುತ್ತಿತ್ತು." – ಪ್ರಾಚೀನ ಭಾರತದಲ್ಲಿ ಶಿಕ್ಷೆಗಳ ಉದ್ದೇಶ ಯಾವುದಾಗಿತ್ತು ?